## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## SC.93/2021

**P.W.-04**
**C.W.-04**

| | | |
|---|---|---|
| ಹೆಸರು | : | Dasa |
| ತಂದೆಯ ಹೆಸರು | : | Raju |
| ವಯಸ್ಸು | : | 49 ವರ್ಷ |
| ಉದ್ಯೋಗ | : | Coolie |
| ವಾಸಸ್ಥಳ | : | Mysuru |

**ದಿನಾಂಕಃ 16.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

ನನ್ನ ಸ್ವಂತ ಊರು ಮೈಸೂರು. ಮೈಸೂರಿನ ಕೆಸರೆಯ ಕುರಿಮಂಡಿಯಲ್ಲಿ ವಾಸ ಮಾಡುತ್ತೇನೆ. ನಾನು ರಸ್ತೆ ಡಾಂಬರು ಕೆಲಸ ಮಾಡುತ್ತೇನೆ. ಚಾಸಾ–1 ನನಗೆ ಗೊತ್ತು. ಮೃತ ರವಿ ಅಲಿಯಾಸ್ ಬಚ್ಚಾ ನನಗೆ ಗೊತ್ತು. ಆತ ನಮ್ಮ ಮನೆಯ ಮೇಲುಗಡೆ ಮನೆಯಲ್ಲಿ ವಾಸ ಮಾಡುತ್ತಿದ್ದ. ನಮ್ಮ ಮನೆಯ ಮೇಲುಗಡೆಗೆ ಆತ ಬಾಡಿಗೆಗೆ ಎಂದು ಬಂದು 3–4 ವರ್ಷಗಳು ಆಗಿದ್ದವು. ಆಗಿನಿಂದಲೂ ಆತನ ಪರಿಚಯವಿತ್ತು. ಮೃತ ರವಿ ರೋಡ್ ರೋಲರಿನ ಚಾಲಕನಾಗಿದ್ದ. ಚಾಸಾ–1 ರವರು ಕಾಂಟ್ರಾಕ್ಟರ್ ಆಗಿದ್ದರು. ಅವರು ರಸ್ತೆ ಕಾಮಗಾರಿಗಳನ್ನು ಮಾಡಿಸುತ್ತಿದ್ದರು.

2. ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು, ಅವರು ನಮ್ಮ ಪಕ್ಕದ ಏರಿಯಾದವರು. 1 ನೇ ಆರೋಪಿ ಕಾರು ಚಾಲಕನಾಗಿದ್ದ, ತಂದೆಯೊಂದಿಗೆ ಹೋಟೆಲು ಕೆಲಸವನ್ನು ಮಾಡುತ್ತಿದ್ದ. 2 ನೇ ಆರೋಪಿ ಏನೂ ಕೆಲಸ ಮಾಡುತ್ತಿದ್ದ ಎನ್ನುವುದು ನನಗೆ ಗೊತ್ತಿಲ್ಲ. 3 ನೇ ಆರೋಪಿ ಗಾರೆ ಕೆಲಸಕ್ಕೆ ಹೋಗುತ್ತಿದ್ದ. ಮೃತ ರವಿ ಮೃತ ಪಟ್ಟು ಎರಡು ವರ್ಷಗಳಾದವು. ಮೃತ ರವಿ ಮತ್ತು ಆರೋಪಿತರು ಸ್ನೇಹಿತರಾಗಿದ್ದರು.

3. ದಿಃ14.12.2020 ರಂದು ಸುಮಾರು ರಾತ್ರಿ 10.00 ರ ಸಮಯಕ್ಕೆ ನಾನು ಊಟ ಮಾಡಿ ಮನೆಯಿಂದ ಹೊರಗಡೆ ಓಡಾಡುತ್ತಿದ್ದೆ. ಆಗ 1 ಮತ್ತು 2 ನೇ ಆರೋಪಿತರು ಸ್ಕೂಟರಿನಲ್ಲಿ ಬಂದು ಮೃತ ರವಿಯ ಮನೆಗೆ ಹೋದರು. ಪುನಃ ಅವರು ಯಾವಾಗ ರವಿಯ ಮನೆಯಿಂದ

ಹೋದರು ಎನ್ನುವುದು ಗೊತ್ತಾಗಲಿಲ್ಲ. ರಾತ್ರಿ 12.30 ರ ಸಮಯಕ್ಕೆ ನಾನು ಮನೆಯ ಹೊರಗಡೆ ಓಡಾಡುತ್ತಲೇ ಇದ್ದೆ. ಆಗ ಈ ಮೂವರು ಆರೋಪಿತರು ರವಿಯ ರೂಮಿಗೆ ಹೋದರು. ಮತ್ತೆ ಅವರುಗಳು ಯಾವಾಗ ಹೊರಗೆ ಹೋದರು ಎನ್ನುವುದು ನನಗೆ ಗೊತ್ತಾಗಲಿಲ್ಲ. ನಾನು ರಾತ್ರಿ 1.00 ಗಂಟೆಗೆ ಮನೆಗೆ ಹೋಗಿ ಮಲಗಿದೆ.

4. ಮರುದಿನ ಬೆಳಿಗ್ಗೆ 9.30 ರ ಸಮಯಕ್ಕೆ ಟೀ ಕುಡಿಯುತ್ತಿದ್ದಾಗ, ರವಿಯ ಮನೆಯ ಪಕ್ಕದ ಮನೆಯಲ್ಲಿದ್ದ ಹೆಂಗಸು ಬಂದು, ಆ ಹುಡುಗ ಚಡ್ಡಿಯಲ್ಲೇ ಮಲಗಿದ್ದಾನೆ, ಬಾಗಿಲು ತೆಗೆದಿದೆ, ಹೆಂಗಸರು-ಮಕ್ಕಳು ಓಡಾಡುತ್ತೇವೆ, ಆತನಿಗೆ ಸರಿಯಾಗಿ ಬಟ್ಟೆ ಹಾಕಿಕೊಳ್ಳಲು ಹೇಳಿ ಎಂದು ಹೇಳಿದಳು. ಆಗ ನಾನು ಮೇಲೆ ಹೋದೆ, ರವಿಯ ರೂಮಿನ ಬಾಗಿಲು ತೆಗೆದಿತ್ತು, ಆತ underware ನಲ್ಲಿ ಮಲಗಿದ್ದ. ಆತನ ಕಾಲಿನ ಮೇಲೆ ಗಾಯವಾಗಿತ್ತು, ನಾಲಿಗೆ ಹೊರಗೆ ಬಂದಿತ್ತು, ಆತ ಸತ್ತು ಹೋಗಿದ್ದ, ಆಗ ನಾನು ಕೆಳಕ್ಕೆ ಬಂದು ಚಾಸಾ-1 ರವರಿಗೆ ಫೋನು ಮಾಡಿದೆ. ನನ್ನ ಮೊಬೈಲ್ ನಂ.9845178044. ಚಾಸಾ-1 ರವರ ಮೊಬೈಲ್ ನಂ.9448049145 ಆಗಿರುತ್ತದೆ. 15 ನಿಮಿಷ ಕಳೆದು ಚಾಸಾ-1 ರವರು ಬಂದು ಏನಾಯಿತು ಎಂದು ಕೇಳಿದರು. ಆಗ ನಾನು, ಆ ಹುಡುಗ ಸತ್ತು ಹೋಗಿದ್ದಾನೆ, ಹೋಗಿ ನೋಡಿ ಎಂದು ಹೇಳಿದೆ. ಆಗ ಅವರು ಹೋಗಿ ನೋಡಿದರು. ಹೇಗಾಯಿತು ಎಂದು ಕೇಳಿದರು. ಆಗ ನಾನು, ಹಿಂದಿನ ರಾತ್ರಿ ಆತನ ಸ್ನೇಹಿತರು ಅಂದರೆ ಆರೋಪಿತರು ಬಂದಿದ್ದ ವಿಷಯವನ್ನು ಹೇಳಿದೆ. ನಂತರ ಚಾಸಾ-1 ರವರು ಪೊ.ಠಾಣೆಗೆ ಹೋಗಿ ದೂರು ನೀಡಿದರು. ಮರುದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಹೇಳಿಕೆಯನ್ನು ಪಡೆದುಕೊಂಡರು.

5. ಚಾಸಾ-1 ರವರು ಪೊಲೀಸರ ಮುಂದೆ ನನ್ನ ಮೊಬೈಲ್ ನಂಬರ್ ಹೇಳುವಾಗ ಒಂದು ನಂಬರನ್ನು ತಪ್ಪಾಗಿ ಹೇಳಿದ್ದರು. ಈ ಬಗ್ಗೆ ಪೊಲೀಸರು ನನ್ನನ್ನು ಕರೆಸಿ ಕೇಳಿದ್ದರು. ಆ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

6. ನಾನು ರವಿಯ ರೂಮು ಮತ್ತು ಆತನ ಶವದ ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-3 ಮತ್ತು 5 ನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ, ಇದು ರವಿಯಿದ್ದ ರೂಮಾಗಿರುತ್ತದೆ ಎಂದು ಹೇಳಿ, ರವಿಯ ಶವವನ್ನು ಗುರುತಿಸಿರುತ್ತಾರೆ.

**ಪಾಟೀಸವಾಲುಃ 2 ನೇ ಆರೋಪಿಗಳ ಪರ ವಕೀಲರಿಂದಃ-**

7. ಚಾಸಾ-1 ರವರು ಸಹ ಡಾಂಬರು ಕೆಲಸ ಮಾಡಿಸುತ್ತಾರೆ ಎನ್ನುವುದು ಸರಿ. ಹೀಗಾಗಿ ನಾನು ಮತ್ತು ಚಾಸಾ-1 ರವರು ಪರಿಚಯಸ್ಥರು ಎನ್ನುವುದು ಸರಿ. ಚಾಸಾ-1 ರವರು ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ ಎನ್ನುವುದು ಸರಿ. ನನ್ನನ್ನು ಅವರು ಕರೆದುಕೊಂಡು ಬಂದಿರುತ್ತಾರೆ ಎನ್ನುವುದು ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ, ನನಗೆ ಸಮನ್ಸ್ ಬಂದಿರುತ್ತದೆ ಹೀಗಾಗಿ ಬಂದಿರುತ್ತೇನೆ ಎನ್ನುತ್ತಾರೆ. ನಾನು ಮತ್ತು ನನ್ನ ಸ್ನೇಹಿತ ಬೈಕಿನಲ್ಲಿ ಇಂದು ನ್ಯಾಯಾಲಯಕ್ಕೆ ಬಂದಿರುತ್ತೇವೆ.

8. ನ್ಯಾಯಾಲಯದಲ್ಲಿ ಏನನ್ನೂ ನುಡಿಯಬೇಕೆಂದು ಚಾಸಾ-1 ರವರು ಹೇಳಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ, ಸಾಕ್ಷಿ, 'ನಾನು ಕಣ್ಣಾರೆ ನೋಡಿರುತ್ತಾನೆ' ಎಂದು ನುಡಿಯುತ್ತಾರೆ. ಈ ಘಟನೆಯ ಬಗ್ಗೆ ನನಗೇನೂ ಗೊತ್ತಿರುವುದಿಲ್ಲ ಎನ್ನುವುದು ಸರಿಯಲ್ಲ.

9. ಶವಸಂಸ್ಕಾರ ಆದ ಮರುದಿನ ಠಾಣೆಗೆ ಹೋಗಿದ್ದೆ. 15 ನೇ ತಾರೀಖಿನಂದು ನಾನು ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿರುವುದಿಲ್ಲ. ಠಾಣೆಗೆ ಬರಬೇಕು ಎಂದು ನನಗೆ ಪೊಲೀಸರು ಲಿಖಿತ ನೋಟಿಸನ್ನೇನೂ ನೀಡಿರಲಿಲ್ಲ. ನೋಟಿಸಿಗೆ ನಾನು ಸಹಿ ಹಾಕಿರುವುದಿಲ್ಲ. ಆದರೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ನನ್ನ ಹೇಳಿಕೆಯನ್ನು ಪಡೆದವರ ಹೆಸರು ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಅವರು ದಾಖಲಿಸಿಕೊಂಡರು. ಅದನ್ನು ಪೊಲೀಸರು ನನಗೆ ಓದಿ ಹೇಳಿದರು.

10. ಆರೋಪಿತರು ನನಗೆ ಗೊತ್ತು. ಆರೋಪಿತರು ಮೊದಲಿಗೆ ಬಂದಾಗ ನಾನು 1 ಮತ್ತು 2 ನೇ ಆರೋಪಿತರನ್ನು ಮಾತನಾಡಿಸಿದೆ. ಪೊಲೀಸರು ಈ ಬಗ್ಗೆ ಕೇಳದೇ ಇದುದ್ದರಿಂದ ನಾನು ಹೇಳಿರುವುದಿಲ್ಲ. ಅವರು ಬಂದಿದ್ದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಅದು ಸಿಲ್ವರ್ ಕಲರಿನ ವಾಹನವಾಗಿತ್ತು. ಇದಕ್ಕೂ ಮುನ್ನ ಮೃತ ರವಿಯ ರೂಮಿನಲ್ಲಿ ಯಾವುದೇ ಗಲಾಟೆ ನಡೆದಿರಲಿಲ್ಲ. ಮಧ್ಯರಾತ್ರಿ 12.30 ರ ಸಮಯದಲ್ಲಿ ಅಲ್ಲಿ ನಿಶಬ್ದವಾಗಿತ್ತು ಮತ್ತು ಯಾವುದೇ ಜನರೂ ಓಡಾಡುತ್ತಿರಲಿಲ್ಲ ಎನ್ನುವುದು ಸರಿ. ಮೃತ ರವಿಯ ರೂಮಿನಲ್ಲೂ ಯಾವುದೇ ಶಬ್ದಗಳು ಕೇಳಿ ಬಂದಿರಲಿಲ್ಲ. ಆರೋಪಿತರು ಮೃತ ರವಿಯ ಮನೆಗೆ ಹೋಗುವಾಗ ಒಂದು ಪ್ಲಾಸ್ಟಿಕ್ ಕವರ್ ಅವರ ಕೈನಲ್ಲಿ ಇತ್ತು. ನಾನು ಅಲ್ಲಿ ವಾಕಿಂಗ್ ಮಾಡುತ್ತಿದ್ದಾಗ, ಕಲೀಂ ಉಲ್ಲಾರವರನ್ನು ಭೇಟಿ ಮಾಡಿರಲಿಲ್ಲ. ರಾತ್ರಿ 9.00 ಗಂಟೆಯ ಸಮಯಕ್ಕೆ 2 ನೇ ಆರೋಪಿಗೆ ನಾಯಿ ಕಚ್ಚಿತ್ತು ಎನ್ನುವ ವಿಷಯ ನನಗೆ

ಗೊತ್ತಿಲ್ಲ. ಆತನಿಗೆ ನಾಯಿ ಕಚ್ಚಿದ್ದರಿಂದ, ಆತ ಚಿಕಿತ್ಸೆ ಪಡೆದು ಮನೆಯಲ್ಲೇ ಮಲಗಿಕೊಂಡಿದ್ದ ಎನ್ನುವುದು ಸರಿಯಲ್ಲ. ಆತ ಅಂದರೆ 2 ನೇ ಆರೋಪಿ ಅಲ್ಲಿ ಬರದಿದ್ದರೂ ಸಹ, ಬಂದಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

11. ಚಾಸಾ-1 ರವರ ಬಳಿಯಲ್ಲಿ ಕುರಿಮಂಡಿಯ ಹುಡುಗರೇ ಕೆಲಸ ಮಾಡುತ್ತಾರೆ ಎನ್ನುವುದು ಸರಿ. ಚಾಸಾ-1 ರವರೊಂದಿಗೆ 2 ನೇ ಆರೋಪಿ ಸಹ ಕೆಲಸ ಮಾಡುತ್ತಿದ್ದ ಎನ್ನುವುದನ್ನು ನಾನು ನೋಡಿರಲಿಲ್ಲ. ಅವರಿಬ್ಬರ ನಡುವೆ ಸಂಬಳದ ವಿಚಾರದಲ್ಲಿ ಗಲಾಟೆಯಾಗಿತ್ತು ಎನ್ನುವುದು ಸರಿಯಲ್ಲ. ಆ ಸಂಬಂಧ ಠಾಣೆಯಲ್ಲಿ ದೂರು ದಾಖಲಾಗಿ ರಾಜೀಯಾಗಿತ್ತು ಎನ್ನುವುದು ಸರಿಯಲ್ಲ. ಆದ್ದರಿಂದ 2 ನೇ ಆರೋಪಿಯ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆ ಎನ್ನುವುದು ಸರಿಯಲ್ಲ.

12. ರವಿಯ ಮನೆಯ ಪಕ್ಕದ ಹೆಂಗಸು ಬಂದು ವಿಷಯ ತಿಳಿಸಿದ್ದನ್ನು ನಾನು ಪೊಲೀಸರ ಮುಂದೆ ಹೇಳಿರುವುದಿಲ್ಲ. ಈ ಪ್ರಕರಣದ ಬಗ್ಗೆ ಏನೂ ಗೊತ್ತಿರದಿದ್ದರೂ ಸಹ ಚಾಸಾ-1 ರವರ ಚಿತಾವಣೆಯ ಮೇರೆಗೆ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀಸವಾಲಿಗಾಗಿ 1 ಮತ್ತು 3 ನೇ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಸಮಯವನ್ನು ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.